OS 89 /2022

PW-1

ದಿನಾಂಕಃ **28.08.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎಸ್ ಟಿ ಎನ್ ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನನ್ನ ಪರವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲಾತಿಗಳನ್ನು ನಿಶಾನೆಗೊಳಿಸಬೇಕಾಗಿ ವಿನಂತಿ.

ಉಪ ತಹಶೀಲ್ದಾರ್, ಕಸಬಾ ಹೋಬಳಿ, ಪಾವಗಡ ತಾಲೂಕು ರವರು ನೀಡಿರುವ ವಂಶವೃಕ್ಷ ನಿಪಿ.1 ಎಂದು, ನೋಟರಿಯವರ ಮುಂದೆ ಪ್ರಮಾಣೀಕರಿಸಿರುವ ವಂಶವೃಕ್ಷ ನಿಪಿ.2 ಎಂದು, ಸರ್ವೆ ನಂಃ 388/3 ಪಿ2 ರ ಪಹಣಿ ನಿಪಿ.3 ಎಂದು, ಸರ್ವೆ ನಂಃ 188/1 ರ ಪಹಣಿ ನಿಪಿ.4 ಎಂದು, ಸರ್ವೆ ನಂಃ 388/2 ರ ಪಹಣಿ ನಿಪಿ.5 ಎಂದು, ಸರ್ವೆ ನಂಃ 389/3 ರ ಪಹಣಿ ನಿಪಿ.6 ಎಂದು, ಈ ಸ್ವತ್ತು(ನಮೂನೆ 9) ನಿಪಿ.7 ಎಂದು, ಈ ಸ್ವತ್ತು(ನಮೂನೆ 9) ನಿಪಿ.8 ಎಂದು, ಸರ್ವೆ ನಂಃ 389/3 ರ ಪಹಣಿ ನಿಪಿ.9 ಎಂದು, ಸರ್ವೆ ನಂಃ 389 ರ 1975 76 ರಿಂದ 1979 80 ರ ಸಾಲಿನ ಕೈ ಬರವಣಿಗೆ ಪಹಣಿಯ ದೃಡೀಕೃತ ನಕು ನಿಪಿ.10 ಎಂದು ಗುರುತಿಸಲಾಯಿತು.

ವಿನಂತಿಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.